ಜೀವಾಂತ್ಯಸ್ಮರಣೆ

ಅಥವಾ

ಆತ್ಮರಾಮನಾಯಕನು, ಮೃತ್ಯು ಶಿಪಾಯಿ
ಇವರಿಬ್ಬರು ಜೀವಾಂತ್ಯದ ವಿಷಯಕ್ಕೆ ಮಾಡಿದ

ಸಂವಾದ

ಮೂರನೇ ಛಾಪೆ

MANGALORE
PRINTED BY STOLZ & REUTHER, BASEL MISSION PRESS
1869

ವ

“ಮನುಷ
ಲಾಭ ವ

ಮ. ಅವ
ಎಂದಿಗೂ
ಅಲಂಕಾರ
ತ್ರಾಮನ

ಆತ್ಮರಾಮನಾಯಕನೆಂಬ ಸಾವಕಾರನು
ಮೃತ್ಯುವೆಂಬ ಶಿಪಾಯಿ ಇವರಿಬ್ಬರು ಜೀವಾಂತ್ಯದ
ವಿಷಯಕ್ಕೆ ಮಾಡಿದ ಸಂವಾದ.

ಮೊದಲನೇ ಪ್ರವೇಶ.

"ಮನುಷ್ಯನು ತನ್ನ ಪ್ರಾಣ ನಷ್ಟ ಪಟ್ಟು, ಲೋಕವನ್ನೆಲ್ಲಾ ಲಾಭ ಮಾಡಿ ಕೊಂಡರೂ, ಅವನಿಗೆ ಪ್ರಯೋಜನವೇನು?"
(ಮತ್ತಾಯ ೧೬, ೨೬.)

ಆತ್ಮರಾಮನಾಯಕನು ತನ್ನ ಸಂಸಾರದ ಉದ್ಯೋಗದಲ್ಲಿ ಉಂಡು, ಕುಡಿದು, ಬಹಳ ಸುಖದಿಂದ ಇದ್ದನು. ಅವನ ಕುಟುಂಬವು ಅದೇ ಪ್ರಕಾರವೇ ಇತ್ತು. ಅವರಿಗೆ ಎಂದಿಗೂ ಏನೂ ಕಡಿಮೆ ಬೀಳಲಿಲ್ಲಾ. ತರತರವಾದ ವಸ್ತ್ರ ಅಲಂಕಾರವಾದ ಭೂಷಣಾದಿಗಳು ಯಥೇಷ್ಟವಿದ್ದಾಗ್ಯೂ, ಆತ್ಮರಾಮನಾಯಕನು ದಿನಾಲು ಇನ್ನು ಹೊಸದನ್ನು ತರಿಸುತ್ತಿ

ದ್ದನು. ಇದಲ್ಲದೆ ರಮ್ಯವಾದ ತೋಟ, ಮನೆ, ಮಹಾಲು, ಮಂಟಪ, ರಥ, ಕುದುರೆ, ಆನೆ ಮುಂತಾದವುಗಳು ಸಹ ಅವನಿಗೆ ಪುಷ್ಕಳವಿದ್ದವು. ಈ ಪ್ರಕಾರ ಲೋಕದೊಳಗಣ ಸೌಖ್ಯ ಭಾಗ್ಯಗಳಲ್ಲಿ ಅವನಿಗೆ ಸಮೃದ್ಧಿ ಇತ್ತು. ದುಃಖವೂ ಕೇಡೂ ಅವನಿಗೆ ಎಂದಾದರೂ ಗೊತ್ತಿದ್ದಿಲ್ಲ; ನಷ್ಟವು ಎಂಥಾದೆಂಬುವದು ಅವನ ಅನುಭವದಲ್ಲಿ ಬರಲಿಲ್ಲ. ಅವನ ವ್ಯಾಪಾರದಲ್ಲಿ ಲಾಭವು ಹೆಚ್ಚುತ್ತಾ, ಜನರಲ್ಲಿ ಅವನಿಗೆ ಬಹಳ ಕೀರ್ತಿ ಉಂಟಾಯಿತು. ಈ ರೀತಿಯಾಗಿ ಎಲ್ಲಾ ಮಾತುಗಳು ಸುರಳಿತವಾಗಿ ೧೦ ವರುಷ ಪರಿಯಂತರ ನಡಿದವು. ಆ ವೇಳೆಯಲ್ಲಿ ಆತ್ಮರಾಮನಾಯಕನ ವಯಸ್ಸು ೩೫ ವರುಷ ಆಗಿತ್ತು. ಒಂದಾನೊಂದು ದಿವಸದಲ್ಲಿ ಅವನು ತನ್ನ ರಂಗಮಹಾಲಿನಲ್ಲಿ ಮಂಚದ ಮೇಲೆ ಸಂತೋಷದಿಂದ ಉರಳುತ್ತಾ, ಅಲ್ಲಿ ಇದ್ದ ಘನತರವಾದ ಚಿತ್ರಗಳನ್ನೂ ಹೆಚ್ಚಿನ ಕ್ರಯವುಳ್ಳ ಚಿನಾಯಿ ಸಾಮಾನು ಪಾತ್ರೆಗಳನ್ನೂ ನೂತನ ವಸ್ತ್ರ ರತ್ನಗಳನ್ನೂ ತರತರವಾದ ಹೆಚ್ಚಿನ ಸಾಮಗ್ರಿಗಳನ್ನೂ ದೃಷ್ಟಿಸಿ, — ನಾನು ಇವುಗಳನ್ನು ನನ್ನ ಪ್ರಯತ್ನದಿಂದ, ನನ್ನ ದ್ರವ್ಯದಿಂದ ಕೂಡಿಸಿದ್ದೇನೆ; ಇವೆಲ್ಲಾ ನನ್ನವೇ; ಇವುಗಳ ಮೇಲೆ ಬೇರೊಬ್ಬರ ಅಧಿಕಾರವಿಲ್ಲಾ; ನನ್ನ ಹಾಗೆ ಈ ಹೊತ್ತಿಗೆ ಈ ಊರಲ್ಲಿ ಈ ದೇಶದಲ್ಲಿ ಯಾವ ಧನವಂತನು ಇದ್ದಾನೆ? ನನ್ನ ಹಾ

ಗೆ ಮಾಡ ಸಾಮರ್ಥ್ಯವುಳ್ಳವನು ಯಾರು? ನನ್ನ ಕುಲದವರಲ್ಲಿ ನಾನೇ ಶ್ರೇಷ್ಠನಾಗಿದ್ಧೇನೆ; ಮತ್ತು ಉಳ್ಕಿ ಜಾತಿಯ ಜನರು ನನ್ನ ಪಾದದ ಕಡಿಗೆ ನೋಡುತ್ತಾರೆಂದು, ಈ ಪ್ರಕಾರ ಮನಸ್ಸಿನಲ್ಲಿ ಆಲೋಚನೆ ಮಾಡಿ, ಬಹಳ ಆನಂದದಿಂದ ಇದ್ದನು. ಅಷ್ಟರೊಳಗೆ ಅವನ ಶರೀರದಲ್ಲಿ ಒಮ್ಮಿಂದೊಮ್ಮೆ ಹೆಚ್ಚು ಕಡಿಮೆ ಆಗಿ, ರಕ್ತವು ತಲೆಗೆ ಏರಲು, ಅವನು ಮೂರ್ಛಿತನಾಗಿ ನೆಲಕ್ಕೆ ಬಿದ್ದನು. ಆಗ್ಯೆ ಮನೆಯಲ್ಲಿ ಇರುವವರೆಲ್ಲರು ಈ ವರ್ತಮಾನ ಕೇಳುತ್ತಲೇ ಬಹಳ ಘಾಬ್ರಿಯಾಗಿ, ಅತ್ತಲಾಗಿ ಇತ್ತಲಾಗಿ ಬಹಳ ಗುಬಾರು ಆಯಿತು. ಆಗಲು ಒಬ್ಬನು ಮಂತ್ರಗಾರನನ್ನು ಕರೆಯುವದಕ್ಕೂ, ಮತ್ತೊಬ್ಬನು ದೂತಲಕ್ಷಣ ಹೇಳುವವನ ಮನೆಗೂ, ಬೇರೊಬ್ಬರು ಬಸವನ ಹನುಮಂತನ ಪೂಜಾರಿಗಳ ಬಳಿಗೂ, ಇನ್ನೊಬ್ಬರು ವೈದ್ಯರ ಬಳಿಗೂ ಓಡಿ ಹೋದರು. ಇಷ್ಟರೊಳಗೆ ಆತ್ಮರಾಮನಾಯಕನಿಗೆ ತನ್ನ ಮೂರ್ಛಿತ ಅವಸ್ಥೆಯಲ್ಲಿ ಒಂದು ಸ್ವಪ್ನ ಬಿತ್ತು. ಅದು ಹ್ಯಾಗಂದರೆ —

ಅವನು ಮಹಾ ಭಯಂಕರವಾದ, ವಿಕಾರ ರೂಪವುಳ್ಳ, ಕಪ್ಪು ವರ್ಣದ ಒಬ್ಬ ಮನುಷ್ಯನು ತನ್ನ ಕಡಿಗೆ ಬರುವದನ್ನು ಕಂಡನು. ಅವನಿಗೆ ಎರಡು ಕಡಿಗೆ ದೊಡ್ಡ ರೆಕ್ಕೆಗಳು ಇದ್ದವು. ಅವನು ನಡಿಯುವಾಗ ಅವು ಭರ್ ಭರ್ಎಂದು ಮಹಾ ಶ

ಬ್ಧವಾಗುತ್ತಿದ್ದವು ಅವನ ಹಲ್ಲುಗಳು ಶೂಲದ ಹಾಗೆ ಇದ್ದವು; ಅವುಗಳನ್ನು ಕರಕರ ಕಡೆಯುವಾಗ್ಯೆ, ಅವನ ಮುಖವು ಅತಿ ಭಯಂಕರವಾಗಿ ಕಾಣಿಸಿತು. ಅವನಿಗೆ ಒಂದು ಉದ್ದವಾದ ಪುಚ್ಛವಿತ್ತು; ಅದರ ಕೊನೆಗೆ, ಚೇಳಿನ ಬಾಲದ ಕೊಂಡಿಯ ಹಾಗೆ, ಬಹಳ ತೀಕ್ಷ್ಣವಾದ ಕೊಂಡಿಯು ಇತ್ತು. ಅದು ಈ ಪುರುಷನ ಯುದ್ಧದ ಬಾಣವಾಗಿ ಅನೇಕ ರೀತಿಯಿಂದ ನಾಶ ಮಾಡುವ ಆಯುಧವಾಗಿತ್ತು. ಈ ಪ್ರಕಾರ ಭಯಂಕರವಾದ ಶಿಪಾಯಿ ತನ್ನ ಕಡಿಗೆ ರೋಷವುಳ್ಳವನಾಗಿ ಬರುವದನ್ನು ಅತ್ಮರಾಮನಾಯಕನು ನೋಡಿದಾಗಲೇ, ವಿಸ್ಮಯನಾದನು. ಅವನ ಕೈ ಕಾಲುಗಳು ನಡುಗಿ, ಎದೆ ಒಡೆದು, ಕಣ್ಣುಗಳ ಮುಂದೆ ಕತ್ತಲೆ ಕೂಡಿಸಿ, ನಾಲಿಗೆ ಒಳಗೆ ಶಳಿಯಲಿಕ್ಕೆ ಆರಂಭಿಸಿತು. ಮತ್ತು ಸರ್ವಾಂಗವೆಲ್ಲಾ ಬೆವರು ಹಿಡಿದು, ಹಲ್ಲುಗಳು ಒಂದರ ಮೇಲೊಂದು ಕುಳಿತು, ಗಟಗರದು, ಮ್ಯೆ ಮೇಲಿನ ಕೂದಲುಗಳು ನಿಗರಿದವು. ಅವನ ಇದುರಿನಿಂದ ಓಡಿ ಹೋಗ ಬೇಕೆಂದರೆ, ಶಕ್ತಿ ಇದ್ದಿಲ್ಲಾ; ಆದದರಿಂದ ಅವನು ಪೂರ್ಣ ಸ್ತಬ್ಧನಾಗಿದ್ದನು. ಅಷ್ಟರಲ್ಲಿ ಆ ಭಯಂಕರನಾದ ಶಿಪಾಯಿಯು ಬೊಬ್ಬೆ ಹೊಡೆಯುತ್ತಾ, ಕ್ಯಾಕರಿಸುತ್ತಾ, ಇವನ ಹತ್ತರ ಬಂದು ನಿಂತನು. ಆವಾಗ್ಯೆ ಇವನು ಅವನ ಉಗ್ರಸ್ವರೂಪದ ಕಡಿಗೆ ನೋಡಲಾರೆನಂತ, ತನ್ನ ಕಣ್ಣು

ಗಳನ್ನು ಮುಚ್ಚಿಕೊಂಡನು. ಅದನ್ನು ಶಿಪಾಯಿ ನೋಡಲು, ದೊಡ್ಡ ಕೂಗು ಹೊಡದು, ಅವನಿಗೆ ಹೇಳಿದ್ದೇನೆಂದರೆ —

ಎಲೋ ಗೃಹಸ್ಥನೇ! ಸಮೀಪಕ್ಕೆ ಬಾ; ಘಾಬರಿ ಆಗ ಬೇಡ; ನನ್ನ ಕಡಿಗೆ ನೋಡು; ನನ್ನ ಮಾತು ಕೇಳು.

ಈ ಶಬ್ದ ಕೇಳಿ, ಆತ್ಮರಾಮನಾಯಕನಿಗೆ ಸ್ವಲ್ಪ ಜೀವ ತಿರುಗಿತು; ಮತ್ತು ಅವನು ಮೆಲ್ಲಗೆ ಅಂದದ್ದು — ಎಲೋ ಅಣ್ಣಾ! ನೀನು ಯಾರು?

ಶಿಪಾಯಿ. ಎಲೇ, ನಾನು ಯಾರೆಂಬುವದು ನಿನಗೆ ಇನ್ನು ಯಾಕೆ ತಿಳಿಯವಲ್ಲದು? ನನ್ನನ್ನು ನೀನು ಎಂದೂ ನೆನಪು ಮಾಡಲಿಲ್ಲೇನು?

ಆತ್ಮರಾಮ. ಇಲ್ಲ ಅಪ್ಪಾ! ನಾನು ನಿನ್ನನ್ನು ಎಂದೂ ನೋಡಲಿಲ್ಲಾ; ಬಳಿಕ ನಿನ್ನ ನೆನಪು ನನಗೆ ಹ್ಯಾಗಾದೀತು?

ಶಿ. ಎಲೋ, ನಾನು ನಿನ್ನ ಊರಿಗೆ ದಿನಂಪ್ರತಿ ಬರುತ್ತಾ ಹೋಗುತ್ತಾ ಇರುತ್ತೇನೆ. ನಿನ್ನ ಗೆಳಿಯರ ಬಾಂಧವರ ಪರಿಚಿತಿಯವರ ಮನೆಗಳಿಗೆ ಎಷ್ಟೋ ಸಾರಿ ಬಂದು ಹೋದೆನಲ್ಲಾ. ನೀನು ನನ್ನ ವಿಷಯ ಅವರನ್ನು ವಿಚಾರಿಸದೆ ಇದ್ದದ್ದು ಹ್ಯಾಗೆ?

ಆ. ಶಿಪಾಯಿ ಅಪ್ಪನವರೇ! ನನಗೆ ಕ್ಷಮೆ ಮಾಡ ಬೇಕು. ನೀವು ನನ್ನ ಮನೆಗೆ ಇದಕ್ಕಿಂತ ಮುಂಚೆ ದಾವಾಗ್ಯೂ ಬ

ರಲಿಲ್ಲಾ; ಆದದರಿಂದ ಇಷ್ಟು ವಿಚಾರಣೆ ಮಾಡ ನನಗೆ ಅ ಗತ್ಯ ಬೀಳಲಿಲ್ಲಾ.

ಶಿ. ಈ ನಿನ್ನ ಮಾತು ಮೂರ್ಖನ ಮಾತಿನ ಹಾಗೆ ಅ ದೆ. ನಾನು ಈ ಹೊತ್ತಿಗೆ ಸಾವಿರಾರು ಜನರ ಮನೆಗಳಿಗೆ ಬಂ ದಿರಲಾಗಿ, ನಿನ್ನಲ್ಲಿಗೆ ಬರಲಿಕ್ಕಿಲ್ಲವೆಂದು ನಿನಗೆ ಹ್ಯಾಗೆ ತಿಳಿಯಿ ತು? ನಿನ್ನ ಹೆಸರೇನು? ನೀನು ಯಾರು? ಎಲ್ಲಿಂದ ಬಂದಿ? ಎಲ್ಲಿಗೆ ಹೋಗುತ್ತೀ? ಎಂಬ ವಿಚಾರ ಒಂದು ವೇಳೆ ನೀನು ಮಾಡುತ್ತಿದ್ದರೆ, ನನ್ನ ಬರುವಿಕೆಯ ವೃಥೆ ನಿನಗೆ ಇರುತ್ತಿತ್ತು; ಮತ್ತು ನನ್ನ ಸಂಗಡ ಬರುವದಕ್ಕೆ ಮೊದಲೇ ಸಿದ್ಧ ಮಾಡಿ ಕೊಳ್ಳುತ್ತಿದ್ದಿ.

ಆ. ಶಿಪಾಯಿ ಅಣ್ಣನವರೇ! ನಿಮ್ಮ ಪಾದಕ್ಕೆ ಬೀಳು ತ್ತೇನೆ, ನನ್ನನ್ನು ಪೀಡಿಸ ಬೇಡಿರಿ. ನಿಮಗೆ ಮನಸ್ಸಿದ್ದರೆ, ನಿ ಮ್ಮ ಹೆಸರು ದಯ ಮಾಡಿ ಹೇಳ ಬೇಕು.

ಶಿ. ಎಲೋ, ನಾನು ಮೃತ್ಯು! ಕೆಲವರು ನನಗೆ ಮರಣ ಅನ್ನುತ್ತಾರೆ.

ಆ. ನೀವು ಇಲ್ಲಿಗೆ ಯಾತಕ್ಕೆ ಬಂದಿರಿ?

ಮೃ. ನಿನ್ನನ್ನು ವೈಯುವದಕ್ಕೆ ಬಂದೆನು.

ಆ. ಬೇಡಲೋ, ಅಣ್ಣಾ! ಬೇಡ, ಅಷ್ಟು ಮಾತ್ರ ಮಾ ಡ ಬೇಡ.

ಮೃ. ಯಾಕೆ ಬೇಡ? ನಿನ್ನ ಜೀವಕ್ಕೆ ನೀನೇ ಧನಿಯಾಗಿದ್ದೀ ಏನು?

ಆ. ನನ್ನ ಮನೆ, ಬಾಳ್ವೆ, ಐಶ್ವರ್ಯ, ವ್ಯಾಪಾರ, ಹುಡುಗರು, ಹುಪ್ಪಡಿ, ಮಕ್ಕಳು, ಮರಿ, ಹೆಂಡತಿ ಮುಂತಾದವರನ್ನು ಬಿಟ್ಟು, ನಾನು ಹ್ಯಾಗೆ ಬರಲಿ? ಅವರ ನನ್ನ ಭೇಟಿ ಇನ್ನು ಮೇಲೆ ಎಲ್ಲಿ ಆದೀತು? ಎಲೇ ಸ್ವಾಮಿಯೇ! ಇದು ಏನು ಮಾಡಿದಿ? ಈಗಲೇ ನನ್ನನ್ನು ಮರಣದ ಬಾಯಿಯಲ್ಲಿ ಯಾಕೆ ಕೊಡುತ್ತೀ? ಇಷ್ಟು ಬೇಗನೆ ಸಾಯುವೆನೆಂದು ನಾನು ನೆನಸಲಿಲ್ಲ.

ಮೃ. ಎಲೋ, ನಿನಗಿಂತ ಚಿಕ್ಕ ಪ್ರಾಯದವರನ್ನು ನಾನು ತಕ್ಕೊಂಡು ಹೋಗುವದನ್ನು ಕಣ್ಣಾರೆ ಕಂಡು, ನೀನೇ ಮಾತ್ರ ಶಾಶ್ವತನೆಂದು ಹ್ಯಾಗೆ ನೆನಸಿದಿ?

ಆ. ನಾನು ನೆನಸುತ್ತಿದ್ದೆನಲ್ಲಾ — ನನ್ನ ಐಶ್ವರ್ಯ ಪುಷ್ಕಳ, ನನ್ನ ವ್ಯಾಪಾರ ದೊಡ್ಡದು, ನನ್ನ ಕೀರ್ತಿ ಘನವಾದದ್ದು, ನನ್ನ ಪದರಿನಲ್ಲಿ ಅನೇಕ ಜನರು ಇದ್ದಾರೆ; ನನಗೆ ಇನ್ನೂ ದೊಡ್ಡ ದೊಡ್ಡ ಕೆಲಸಗಳು ಮಾಡುವದುಂಟು. ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ, ನನ್ನ ಚಿಕ್ಕ ಮಗಳ ಲಗ್ನ ಬಹಳ ಸಂಭ್ರಮದಿಂದ ಮಾಡ ಬೇಕು; ಇನ್ನು ದೊಡ್ಡ ಪದವಿ ಸಂಪಾದಿಸ ಬೇಕು; ಆದದರಿಂದ ನೀನು ನನ್ನಂಥವನ

ಮನೆಗೆ ಇಷ್ಟು ಬೇಗನೇ ಬರುವಿ ಎಂತ ನನ್ನ ಯೋಚನೆಯಲ್ಲಿ ಇದ್ದಿಲ್ಲ.

ಮೃ. ನೀನು ಹೀಗೆ ತಿಳು ಕೊಂಡದರಿಂದ ನಾನು ನಿನಗೆ ಮೂರ್ಖನನ್ನುತ್ತೇನೆ.

ಆ. ನಿಮಗೆ ಬೇಕಾದದ್ದು ಅನ್ನಿರಿ, ಪರಂತು ಹ್ಯಾಗೆ ಬಂದಿರೋ, ಹಾಗೇ ಮಾತ್ರ ತಿರಿಗಿ ಹೋಗಿರಿ. ನಾನು ನಿಮಗೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ನಾನು ಈಗ ಉಣ್ಣುವ ಸೌಖ್ಯದ ಬಾಯಿಯಲ್ಲಿ ಮಣ್ಣು ಹಾಕ ಬೇಡಿರಿ. ಊರಲ್ಲಿ ಮುದುಕರು ಗಿದುಕರು ನಿಮಗೆ ಏನು ಕಡಿಮೆ? ತಿನ್ನಲಿಕ್ಕೆ ಇಲ್ಲದಂಥ, ಭೂಮಿಗೆ ಭಾರವಾದಂಥ ಬಡ ಜನರು ಪುಷ್ಕಳ ಇದ್ದಾರೆ; ಅವರನ್ನು ಯಾಕೆ ತಕ್ಕೊಂಡು ಹೋಗವಲ್ಲಿ? ರೋಗಿಷ್ಟರು ರಾತ್ರಿಯಲ್ಲಿ ಅಯ್ಯಯೋ ಅಯ್ಯಯೋ ಎಂದು ನಿನ್ನನ್ನು ಕರೆಯುತ್ತಾರೆ; ಅವರ ಕಡಿಗೆ ಯಾಕೆ ಹೋಗವಲ್ಲಿ? ಬೇಕಾದರೆ ನನ್ನ ಚಾಕ್ರಿಯವರಲ್ಲಿ ಒಬ್ಬನನ್ನು ತಕ್ಕೊಂಡು ಹೋಗು. ಇಲ್ಲದಿದ್ದರೆ ನನಗೆ ಒಬ್ಬ ಸಾವಕಾರನ ಸಂಗಡ ಸುಪ್ರೀಮ್ ಕೋರ್ಟಿನಲ್ಲಿ ಲಕ್ಷ ದೀಡ ಲಕ್ಷದ ರೂಪಾಯಿಯ ನ್ಯಾಯ ನಡಿಯುತ್ತದೆ; ಅವನನ್ನು ತಕ್ಕೊಂಡು ಹೋಗು; ನನ್ನ ದಾವೆ ಆರೆ ಖರೇ ಆದೀತು. ಆದರೆ ಈಗಲೇ ಮಧ್ಯದಲ್ಲಿ ನನ್ನನ್ನು ಕರೆಯ ಬೇಡ. ಮುಂದೆ ಮುಪ್ಪಿನವನಾದ

ಮೇಲೆ ಒಂದು ವೇಳೆ ನೋಡಲಿಕ್ಕೆ ಬಂದೀತು. ಮರಣವೇ, ನಿನ್ನ ಕೈಯೊಳಗಿಂದ ನಾನು ಎಲ್ಲಿಗೆ ತಪ್ಪಿಸಿ ಕೊಂಡು ಹೋಗುವೆನು? ಸುಮ್ಮನೆ ಘಾಬರಿ ಮಾಡಿ, ನನ್ನ ಹಾಲಿನಲ್ಲಿ ವಿಷ ಹಾಕಿದರೆ, ನಿನಗೆ ಪ್ರಯೋಜನವೇನು?

ಮೃ. ನಿನ್ನ ಕಡೇ ಘಳಿಗೆ ಹತ್ತರ ಬಂದಾಗ್ಯೂ, ನಿನ್ನ ದ್ರವ್ಯದ ಕೀರ್ತಿಯಾಶೆಯನ್ನು ನೀನು ಇನ್ನೂ ಬಿಡವಲ್ಲಿ. ಇದಲ್ಲದೆ ನೀನು ಎರಡನೆಯವರಿಗೆ ಮರಣ ಇಚ್ಛೈಸುತ್ತೀ. ಅದರಿಂದ ನೀನು ಉಳಿಯ ಬೇಕೆಂದು ನೋಡುತ್ತೀಯಾ? ಈ ನಿನ್ನ ಇಚ್ಛೆ ಎಷ್ಟು ಕೆಟ್ಟದ್ದೇ; ಇದರ ವಿಷಯ ನೀನು ನ್ಯಾಯ ತೀರುವಿಕೆಯ ದಿವಸದಲ್ಲಿ ಉತ್ತರ ಕೊಡ ಬೇಕಾಗುವದು. ಆಗ್ಯೆ ನಿನ್ನ ಎಲ್ಲಾ ಗುಪ್ತ ಕರ್ಮಗಳು ಬೈಲಿಗೆ ಬಂದಾವು; ಆಗ್ಯೆ ನಿನಗೆ ದೊಡ್ಡ ಶಿಕ್ಷೆ ಆದೀತು.

ಆ. ಎಲೇ ಮರಣವೇ! ನೀನು ನನ್ನನ್ನು ಹ್ಯಾಗೆ ವೈಯುವಿ? ಮತ್ತು ಎಲ್ಲಿಗೆ ವೈಯುತ್ತೀ? ಇದರ ವಿಷಯ ನನ್ನ ಅನುಭವಕ್ಕೆ ಬರುವ ಹಾಗೆ, ಏನಾದರೂ ಹೇಳ ಬಲ್ಲಿಯಾ?

ಹೀಗೆ ಅನ್ನುತ್ತಲೇ, ಮೃತ್ಯು ಅವನ ಕೈ ಕಾಲು ಕಟ್ಟಿ, ಅವನನ್ನು ಮೋಟ್ಟಿ ಮಾಡಿ, ತನ್ನ ಪುಛ್ಛದಿಂದ ಸುತ್ತಿ, ಮೇಲಕ್ಕೆ ಎತ್ತಿ ಕೊಂಡು, ಲೋಕದ ಸಮಸ್ತ ರಾಜ್ಯಗಳನ್ನು ನೋಡೆಂದು ಹೇಳಿದನು. ಆಗ್ಯೆ ಆತ್ಮರಾಮನಾಯಕನಿಗೆ ಒಂದು

ದೊಡ್ಡ ಸಮುದ್ರ ಕಂಡಿತು. ಅದರ ಆಚೆ ಕಡೆಯಲ್ಲಿ ಎಲ್ಲಾ
ಕತ್ತಲೆಯಾಗಿ ಭಯಂಕರವಾಗಿ ಕಾಣ ಬಂತು. ಮುಂದೆ ಏನು
ಅದೆ? ದಾರಿ ಯಾವ ಕಡಿಗೆ? ತಾನು ಹೋಗುವದು ಎಲ್ಲಿ
ಗೆ? ಎಂದು ಅವನಿಗೆ ತಿಳಿಯದೆ ಹೋಯಿತು. ಅಳುವದು,
ಹಲ್ಲು ಕಡಿಯುವದು ಮಾತ್ರ ಒಂದು ಉದ್ದವಾದ ತಗ್ಗಿನಿಂ
ದ ಕೇಳ ಬಂತು. ಇದನ್ನು ಕೇಳಿ ಅವನು ಅತಿ ಭಯಸ್ಥನಾದ
ನು. ಮತ್ತು ಮೃತ್ಯುವಿನ ಪುಚ್ಛಕ್ಕೆ ಇದ್ದ ಕೊಂಡಿಯು ಅವನಿ
ಗೆ ತಗಲಿದಾಗಲೇ, ಬಹಳ ಬಾಧೆ ಕೊಡುವ ನೋವು ಉಂ
ಟಾಯಿತು. ಆಗ ಅವನು ಮೃತ್ಯುಶಿಪಾಯಿಗೆ ಅತಿ ವಿನಯ
ದಿಂದ ಬೇಡಿ ಕೊಂಡದ್ದೇನಂದರೆ — ನನಗೆ ಒಂದು ಕ್ಷಣ ಮಾ
ತ್ರ ಅವಕಾಶ ಕೊಡು; ಯಾಕಂದರೆ ನನ್ನ ಜೀವ ಬಹಳ ಕಶವಿ
ಶಿ ಆಯಿತು; ನಾನು ಸತ್ತಿದ್ದರೆ, ಇಲ್ಲವೇ ಹುಟ್ಟದೆ ಇದ್ದರೆ,
ಬಹಳ ಒಳ್ಳೇದಾಗಿರುತ್ತಿತ್ತು; ಪರಂತು ಈ ದುಃಖವನ್ನೇ ನಾ
ನು ಸೈರಿಸಲಾರೆನು; ನನ್ನನ್ನು ಬಿಡು, ನನ್ನನ್ನು ಬಿಡು; ನನ್ನಿಂ
ದ ಈ ದುಃಖ ತಾಳಲಾಗದು. ಆಗ ಮೃತ್ಯುವು ಅವನನ್ನು
ಸ್ವಲ್ಪ ಬಿಟ್ಟು, ಹೇಳಿದ್ದೇನಂದರೆ — ಎಲೇ ನಿನ್ನಿಂದ ನನ್ನ ವೇ
ಧನೆ ಸಹಿಸಲಾಗಲಿಲ್ಲಾ; ನಾನಾದರೆ ನಿನ್ನನ್ನು ಶರೀರದೊಳ
ಗಿಂದ ಬಿಡಿಸಿ ತಕ್ಕೊಂಡು ಹೋಗುವ ಬಡ ಶಿಪಾಯಿ ಆಗಿ
ದ್ದೇನೆ; ಪರಂತು ಇನ್ನು ಮುಂದೆ ನಿನಗೆ ಎರಡನೇ ಮರಣ ಬ

ರಲು, ನಿನ್ನ ಶರೀರ ಆತ್ಮ ಎಂದೆಂದಿಗೂ ಒಂದಾಗಿದ್ದು, ಇಂಥಾ ಸ್ಥಿತಿಯಲ್ಲಿ ಇರ ಬೇಕಾದರೆ, ನೀನು ಏನು ಮಾಡುವಿ?

ಆ. ಎರಡನೇ ಮರಣ ಅಂದರೇನು?

ಪ್ರ. ಅಂಜುವವರಿಗೂ ಅವಿಶ್ವಾಸಿಗಳಿಗೂ ಅಪಭ್ರಷ್ಟರಿಗೂ ಕೊಲೆಗಾರರಿಗೂ ಜಾರರಿಗೂ ಶೂನ್ಯಗಾರರಿಗೂ ವಿಗ್ರಹಾರಾಧಕರಿಗೂ ಸುಳ್ಳುಗಾರರೆಲ್ಲರಿಗೂ ಬೆಂಕಿ ಗಂಧಕಗಳಿಂದ ಉರಿಯುವ ಕೆರೆಯಲ್ಲಿ ಪಾಲುಂಟು. ಇದು ಎರಡನೇ ಮರಣವು. (ಪ್ರಕಟಣೆ ೨೧, ೮.)

ಆ. ಅಲ್ಲಿ ನಾನು ಎಷ್ಟು ಕಾಲ ಇರ ಬೇಕಾಗುವದು?

ಪ್ರ. ಅಲ್ಲಿಂದ ತಿರಿಗಿ ಹೊರಕ್ಕೆ ಬರುವೆನೆಂಬ ಆಶೆ ವ್ಯರ್ಥ. ಅದು ನಿತ್ಯ ದಂಡಣೆಯೇ. ಅಲ್ಲಿ ನೀನು ಅನಂತ ಕಾಲ ನಾಶನದಲ್ಲಿದ್ದಾಗ್ಯೂ, ಪೂರ್ಣವಾಗಿ ಇಲ್ಲದೆ ಹೋಗೋಣವಿಲ್ಲ. ಅಗದಿ ನಿರ್ಮೂಲವಾಗಿ ಹೋದರೆ, ಆ ದುಃಖಕ್ಕೆ ತೀರ್ಪು ಆದೀತೆಂದು ನೀನು ಒಂದು ವೇಳೆ ನೆನಸುತ್ತೀ; ಹಾಗೆ ಆಗದು. ನಿತ್ಯ ನಿತ್ಯ ದುಃಖ, ಮಹಾ ಯಾತನೆ ಅನುಭೋಗಿಸುತ್ತಾ ಇರುವಿ, ಅಷ್ಟೇ.

ಆ. ಇದನ್ನು ಕೇಳಿ, ನನಗೆ ಅಂಜಿಕೆ ಬರುತ್ತದೆ. ಆದರೆ ಈಗ ನಾನು ಏನು ಮಾಡಲಿ? ನನಗೆ ರಕ್ಷಣೆ ಹ್ಯಾಗೆ ಆದೀತು? ಈ ಎರಡನೇ ಮರಣಕ್ಕೆ ತಪ್ಪಿಸಿ ಕೊಳ್ಳುವದು ಹ್ಯಾಗೆ?

ಮ್ರು. ನಾನು ಪರಾತ್ಪರನಾದ ದೇವರ ದೂತನೇ; ಆತನಿಂದ ನಿನಗೆ ಅಪ್ಪಣೆ ಆದದ್ದೇನಂದರೆ — ಐಶ್ವರ್ಯವಂತನೂ ದ್ರವ್ಯಸ್ಥನೂ ಕಡಿಮೆ ಇಲ್ಲದವನೂ ಆಗಿದ್ದೇನೆ ಅಂದು ಕೊಂಡು, ನೀನು ಸಂಕಟ ಉಳ್ಳವನೂ ಕರುಣೆಗೆ ತಕ್ಕವನೂ ದರಿದ್ರನೂ ಕುರುಡನೂ ಬತ್ತಲೆಯಾದವನೂ ಆಗಿದ್ದೀ ಎಂದು ಅರಿಯೆ. ನೀನು ಐಶ್ವರ್ಯವಂತನಾಗುವ ಹಾಗೆ ಬೆಂಕಿಯಲ್ಲಿ ಶೋಧಿಸಿದ ಚಂಗಾರವನ್ನೂ, ನಿನ್ನ ಬತ್ತಲೆತನದ ನಾಚಿಕೆಯು ಕಾಣದ ಹಾಗೆ, ನಿನಗೆ ಧರಿಸುವದಕ್ಕೆ ಬಿಳೇ ವಸ್ತ್ರಗಳನ್ನೂ ನನ್ನಿಂದ ಕೊಂಡು ಕೊಂಡು, ನೀನು ನೋಡುವ ಹಾಗೆ, ನಿನ್ನ ಕಣ್ಣುಗಳಿಗೆ ಅಂಜನವನ್ನು ಹಚ್ಚ ಬೇಕೆಂದು ನಿನಗೆ ಆಲೋಚನೆ ಹೇಳುತ್ತೇನೆ (ಪ್ರಕಟಣೆ. ೩, ೧೭. ೧೮.) ಆದದರಿಂದ ಈಗ ನಾನು ನಿನಗೆ ಯಾವದು ಹೇಳಿದೆನೋ, ಅದರ ನೆನಪು ಹಟ್ಟಿ ಹಿಡಿ; ಮಾನಸಾಂತರ ಪಡು. ನೀನು ಎಚ್ಚರಿಕೆ ಆಗಿರದಿದ್ದರೆ, ನಾನು ಕಳ್ಳನಂತೆ ಥಟಗಿ ನಿನ್ನ ಬಳಿಗೆ ಬರುವ ವೇಳೆಯನ್ನು ನೀನು ಅರಿಯದೆ ಇರುವಿ.

ಆ. ನನಗೆ ಇಷ್ಟರ ಮೇಲೆ ಪೂರ್ಣ ತಿಳುವಿಕೆ ಬರುವದು ಹ್ಯಾಗೆ? ಮತ್ತು ನೀನು ಬರುವದರೊಳಗೆ ನಾನು ಹ್ಯಾಗೆ ಸಿದ್ಧನಾಗಲಿ?

ಮ್ರು. ಇದರ ವಿಷಯ ವಿವರವಾಗಿ ತಿಳು ಕೊಳ್ಳ ಬೇಕೆಂ

ದು ನೀನು ಅಪೇಕ್ಷೆ ಮಾಡಿದರೆ, ಕಲಿಸುವವರು ಇದ್ದಾರೆ. ನಿನ್ನ ಊರಲ್ಲಿ ಸುವಾರ್ತಿಕನೆಂಬ ಹೆಸರುಳ್ಳ ಒಬ್ಬ ಮನುಷ್ಯನು ಇದ್ದಾನೆ; ಅವನ ಕಡಿಗೆ ಹೋಗು; ಅವನು ನಿನಗೆ ಎಲ್ಲಾ ಹೇಳ್ಯಾನು.

ಇಷ್ಟು ಹೇಳಿ, ಮೃತ್ಯುಶಿಪಾಯಿ ಹೊರಟು ಹೋದನು. ಇತ್ತಲಾಗಿ ಆತ್ಮರಾಮನಾಯಕನ ಶರೀರಕ್ಕೆ ವೈದ್ಯರು ಪುಷ್ಕಳ ಉಪಚಾರ ಮುಂತಾದದ್ದನ್ನು ಮಾಡಿ, ಅವನು ಸ್ವಸ್ಥವಾಗ ಕೂಡದೆಂದು ತಿಳು ಕೊಂಡು, ಅವನ ಆಶೆ ಬಿಟ್ಟರು. ಆದರೆ ಅವನು ಆ ಸ್ವಪ್ನದೊಳಗಿಂದ ಬಿಡುಗಡೆ ಆದ ಕೂಡಲೇ, ಸ್ವಲ್ಪ ಸ್ವಲ್ಪ ಶ್ವಾಸ ಬಿಡಲಿಕ್ಕೆ ಆರಂಭಿಸಿ, ಬಳಿಕ ಕೆಲವು ನಿಮಿಷದೊಳಗೆ ಕೈ ಕಾಲು ಅಗಳಾಡಿಸಿದನು. ತರುವಾಯ ಘಳಿಗೆಯ ಮೇಲೆ ಎಚ್ಚರಿಕೆ ಆಗಿ, ಮಾತಾಡಲಿಕ್ಕೆ ಹತ್ತಿದನು. ಮತ್ತು ಕೆಲವು ದಿವಸಕ್ಕೆ ಪೂರ್ಣವಾಗಿ ನೆಟ್ಟಗೆ ಆದನು. ಮುಂದೆ ಅವನು ದೇವರ ಕೃಪೆಯಿಂದ ೧೦ ವರುಷ ಪರಿಯಂತರ ಬದುಕಿದನು. ಆ ಕಾಲದಲ್ಲಿ ಅವನಲ್ಲಿ ಆದ ಹೆಚ್ಚು ಕಡಿಮೆಯನ್ನು ಈ ಪುಸ್ತಕ ಓದುವವರು ಮುಂದೆ ಬರೆದ ಸಂಭಾಷಣೆಯಿಂದ ತಿಳು ಕೊಳ್ಳಲಿ. ಅದು ಮೃತ್ಯುವಿನ ಕಡೇ ಭೇಟಿಯ ಸಮಯದಲ್ಲಿ ಅವರಿಬ್ಬರೊಳಗೆ ನಡಿಯಿತು.

ಎರಡನೇ ಪ್ರವೇಶ.

"ಕರ್ತನ ದೃಷ್ಟಿಯಲ್ಲಿ ಆತನ ಭಕ್ತರ ಮರಣವು ಅಮೂಲ್ಯವಾಗಿದೆ." (ಕೀರ್ತನೆ. ೧೧೬, ೧೫.)

ಹತ್ತು ವರುಷಗಳಾದ ಮೇಲೆ, ಆತ್ಮರಾಮನಾಯಕನು ಹೆಚ್ಚು ಕಡಿಮೆ ಒಂದು ತಿಂಗಳಿನ ಪರಿಯಂತರ ಕ್ಷಯರೋಗದಲ್ಲಿ ಬಿದ್ದು, ಅಗದಿ ನಿತ್ರಾಣಿಯಾದನು. ದಿನಂಪ್ರತಿಯಲ್ಲಿ ರಾತ್ರಿಗೂ ಮುಂಜಾನೆಗೂ ದಮ್ಮಿನಿಂದ ಬಹಳ ತೊಂದರೆ ಪಡುತ್ತಾ, ಒಂದು ಕ್ಷಣವಾದರೂ ಕೂಡ್ರಲಾರದಿದ್ದನು. ಆದರೂ ಅವನು ತನಗಿದ್ದ ಕಷ್ಟದ ದೆಶೆಯಿಂದ ಗುಣುಗುಟ್ಟದೆ, ತನ್ನ ಮನಸ್ಸಿನಲ್ಲಿ ಅಂದು ಕೊಂಡದ್ದೇನಂದರೆ — ನನ್ನ ವಿಮೋಚಕನು ಬದುಕುತ್ತಾನೆಂದು ತಿಳಿದಿದ್ದೇನೆ. (ಯೋಬ. ೧೯, ೨೫.) ಕರ್ತನು ಪ್ರೀತಿ ಮಾಡುವವನನ್ನು ಶಿಕ್ಷಿಸುತ್ತಾನೆ; ಮತ್ತು ತಾನು ಶೇರಿಸಿ ಕೊಳ್ಳುವ ಒಬ್ಬೊಬ್ಬ ಮಗನನ್ನು ಹೊಡಿಯುತ್ತಾನೆ. (ಇಬ್ರಿ. ೧೨, ೬.) ನಾನು ಶ್ರಮೆಯನ್ನು ದೇವರ ನಿಮಿತ್ತ ತಾಳಿ ಕೊಂಡರೆ, ಮುಂದೆ ನನಗೆ ಒಳ್ಳೇ ಫಲ ಶಿಕ್ಕೀತು. ಎಲ್ಲಾ ಶಿಕ್ಷೆಯು ತಾತ್ಕಾಲಕ್ಕೆ ಸಂತೋಷಕರವಾ

ದದ್ದಲ್ಲಾ, ದುಃಖಕರವಾದದ್ದೆಂದು ತೋಚುತ್ತದೆ; ಆದರೆ ತರುವಾಯ ಅದರಿಂದ ಸಾಧಿಸಲ್ಪಟ್ಟಿರುವವರಿಗೆ ಸಮಾಧಾನವುಳ್ಳ ನೀತಿಫಲವನ್ನು ಕೊಡುವದು. (ಇಬ್ರಿ. ೧೨, ೧೧.) ಇದರ ನಿಮಿತ್ತ ನಾನು ನನ್ನ ರೋಗದ ವಿಷಯ ದುಃಖ ಮಾಡುವದು ಯಾಕೆ? ನನ್ನ ಮನೆ ಇಲ್ಲಿ ಇಲ್ಲಾ. ನಾನು ಇಲ್ಲಿ ಶರೀರದಲ್ಲಿ ವಸ್ತಿ ಮಾಡುತ್ತಿರುವ ಕಾಲಕ್ಕೆ ಕರ್ತನಿಗೆ ಪರವಾಸಿಯಾಗಿದ್ದೇನೆ. ಆತನು ಕರೆಯುತ್ತಲೇ, ನಾನು ಸಂತೋಷದಿಂದ ಆತನ ಬಳಿಗೆ ಹೋಗುವೆನು. ಈ ಮೊದಲಾದ ನೆನವುಗಳಿಂದ ಆತ್ಮರಾಮನಾಯಕನು ತನ್ನ ಶರೀರದ ಬೇನೆಯನ್ನು ಮರೆತು, ಮನಸ್ಸಿನಲ್ಲಿ ಸಮಾಧಾನ ಹೊಂದಿ, ನಿದ್ರೆ ಗೈದನು. ಆ ವೇಳೆಯಲ್ಲಿ ಅವನಿಗೆ ಒಂದು ಸ್ವಪ್ನ ಬಿತ್ತು, ಅದೇನಂದರೆ — ಹತ್ತು ವರುಷದ ಹಿಂದೆ ಅವನು ನೋಡಿದ ಮಹಾ ಭಯಂಕರವಾದ ಶಿಪಾಯಿಯು ಶಾಂತನಾಗಿ, ಸುಂದರ ರೂಪವುಳ್ಳವನಾಗಿ, ತನ್ನ ಕಡಿಗೆ ಬರುತ್ತಿರುವದನ್ನು ಕಂಡನು. ಅವನ ಬಳಿಯಲ್ಲಿ ಅವನ ಎಲ್ಲಾ ಆಯುಧಗಳು ಇದ್ದವು; ಪರಂತು ಮುಂಚೆ ಅವನ ಪುಚ್ಚಕ್ಕೆ ಇದ್ದ ಕೊಂಡಿಗೆ ಬದಲಾಗಿ ಈ ಸಾರಿ ಮಖಮಾಲಿನಂತೆ ಮೃದುವಾದ ಒಂದು ಅರಳಿದ ಬಿಳೇ ಗೊಂಡೆ ಇತ್ತು. ಅವನನ್ನು ನೋಡಿ, ಆತ್ಮರಾಮನಾಯಕನು ಅಂದದ್ದೇನಂದರೆ—

ಅಹಾ! ನನ್ನ ಪ್ರಿಯ ಮಿತ್ರನೇ! ಬೇಗ ಬಾ! ನಾನು ಅಂದಿನಿಂದ ನಿನ್ನ ದಾರಿ ನೋಡುತ್ತಾ ಇದ್ದೇನೆ.

ಮೃ. ಎಲೇ, ನಾನು ಬಂದದ್ದರಿಂದ ನಿನಗೆ ಜಯ ಹತ್ತ ವಲ್ಲದು ಯಾಕೆ?

ಆ. ನೀನು ನನ್ನನ್ನು ನನ್ನ ಮನೆಗೆ ಕರಕೊಂಡು ಹೋಗುವದಕ್ಕೆ ಬಂದಿದ್ಧೀ ಎಂತ ನಿನ್ನ ಉಪಕಾರವನ್ನು ಬಹಳ ನೆನಸುತ್ತೇನೆ.

ಮೃ. ನಿನ್ನ ಮನೆ ಮಾರು ಎಲ್ಲಾ ಇಲ್ಲಿ ಇರಲಾಗಿ, ನನ್ನ ಸಂಗಡ ಮನೆಗೆ ಹೋಗ ಬೇಕೆಂಬ ಮಾತು ಯಾಕೆ ಹೇಳುತ್ತೀ?

ಆ. ಯೇಸು ಕ್ರಿಸ್ತನು ನನಗೋಸ್ಕರ ಪರಲೋಕದಲ್ಲಿ ಸ್ಥಳ ಸಿದ್ಧ ಮಾಡುವದಕ್ಕೆ ಹೋಗಿದ್ಧಾನೆ. ಆತನು ಹೋಗುವಾಗ ಹೇಳಿದನಲ್ಲಾ — ನನ್ನ ತಂದೆಯ ಮನೆಯಲ್ಲಿ ಅನೇಕ ನಿವಾಸಿಗಳು ಅವೆ. (ಯೋಹಾ. ೧೪, ೨.)

ಮೃ. ಆತನು ಪರಲೋಕಕ್ಕೆ ಹೋಗಿದ್ಧಾನೆ, ಸರಿ. ಪರಂತು ಆತನಿಗೂ ನಿಮಗೂ ಭೇಟಿ ಆಗುವದು ಹ್ಯಾಗೆ?

ಆ. ಆತನು ತಾನೇ ಹೇಳಿದನಲ್ಲಾ — ನಾನು ಇರುವಲ್ಲಿ ನೀವು ಇರುವ ಹಾಗೆ, ನಾನು ತಿರಿಗಿ ಬಂದು, ನಿಮ್ಮನ್ನು ನನ್ನ ಬಳಿಗೆ ಶೇರ ತೆಗಿಯುವೆನು. (ಯೋಹಾ. ೧೪, ೩.)

ಮೃ. ನೀನು ನನ್ನ ಸಂಗಡ ಬಂದದ್ದಾದರೆ, ನಿನ್ನ ಸಂ

ಪತ್ತು ಐಶ್ವರ್ಯವನ್ನೆಲ್ಲಾ ಬಿಟ್ಟು, ಕೇವಲ ಬಡವನ ಹಾಗೆ ಆಗುವಿ, ನೋಡು!

ಆ. ನಾನು ಬಡವನಾಗುವದು ಹ್ಯಾಗೆ? ನನಗೋಸ್ಕರ ಲಯ, ಕಳಂಕ, ಕ್ಷಯವಿಲ್ಲದ ಬಾಧ್ಯತೆಯು ಪರಲೋಕದಲ್ಲಿ ಇಟ್ಟದೆ. (೧ ಪೇತ್ರ. ೧, ೪.)

ಮೃ. ನಿನ್ನನ್ನು ನಾನು ತಕ್ಕೊಂಡು ಹೋದರೆ, ನಿನ್ನ ಹುಡುಗರೂ ಮಕ್ಕಳೂ ದಿಕ್ಕಿಲ್ಲದವರಾಗುವರು, ಮತ್ತು ನಿನ್ನ ಹೆಂಡತಿ ವಿಧವೆಯಾಗುವಳು. ಅವರ ಪರಾಂಬರಿಕೆ ಯಾರು ಮಾಡುವರು?

ಆ. ದೇವರು ದಿಕ್ಕಿಲ್ಲದವರಿಗೆ ತಂದೆ, ವಿಧವೆಗಳಿಗೆ ನ್ಯಾಯಾಧಿಪತಿ. (ಕೀರ್ತನೆ ೬೮, ೫.) ಮತ್ತು ನನ್ನ ಪೂರ್ಣ ವಿಶ್ವಾಸವು ದೇವರ ಮೇಲೆ ಅದೆ. ನೀತಿವಂತನು ಬಿಡಲ್ಪಟ್ಟದ್ದನ್ನೂ ಅವನ ಸಂತಾನವು ಭಿಕ್ಷಕ್ಕೆ ಹೋದದ್ದನ್ನೂ ಎಂದಿಗೂ ನೋಡಲಿಲ್ಲಾ. (ಕೀರ್ತನೆ. ೩೭, ೨೫.)

ಮೃ. ನಿನ್ನ ಹೆಂಡತಿ ಮಕ್ಕಳ ಭೇಟಿ ನಿನಗೆ ಎಂದಿಗೂ ತಿರಿಗಿ ಆಗಲಿಕ್ಕಿಲ್ಲ. ಅವರನ್ನು ಬಿಟ್ಟು ಹೋಗುವದು ನಿನಗೆ ಹ್ಯಾಗೆ ಒಳ್ಳೇದಾಗಿ ಕಾಣಿಸುತ್ತದೆ? ನಿನ್ನ ಸಲುವಾಗಿ ಅವರು ದುಃಖ ಮಾಡಿ ಕೊಳ್ಳುತ್ತಾ ಕೂತಾರಲ್ಲವೋ?

ಆ. ನಾನು ಸಾಯುವ ಸಮಯದಲ್ಲಿ ನಾನಾಗಲಿ ಅ

ಥವಾ ನನ್ನ ಕುಟುಂಬದವರಾಗಲಿ ಚರವಸವಿಲ್ಲದ ಉಳಿಕಿ ಜ
ನರ ರೀತಿಯಿಂದ ದುಃಖ ಮಾಡುವದಿಲ್ಲ; ಯಾಕಂದರೆ ಯೇಸು
ಸತ್ತು ತಿರಿಗಿ ಎದ್ದನು ಎಂದು ನಾವು ನಂಬಿದರೆ, ನಿದ್ರೆ ಹೋ
ದವರನ್ನು ದೇವರು ಯೇಸುವಿನ ಮುಖದಿಂದ, ಆತನ ಸಂಗಡ
ವೈಯುವನು. (೧ ಥೆಸ್ಸ. ೪, ೧೩. ೧೪.)

ಮೃ. ನೀನು ಈಗಲೇ ಸತ್ತರೆ, ಎಲ್ಲಾ ತೀರಿತು; ಆ
ಮೇಲೆ ಏನದೆ? ಮನುಷ್ಯನು ಉಂಡು ಕುಡಿದು ಜೀವದಿಂದಿ
ರುವ ತನಕ ಸಕಲವು ಉಂಟು. ಒಮ್ಮಿಂದೊಮ್ಮೆ ಸತ್ತು ಬೂ
ದಿಯಾಗಿ ಅಥವಾ ಮಣ್ಣಾಗಿ ಬಿದ್ದರೆ, ಉಳಿಯುವದೇನು?

ಆ. ಕ್ರಿಸ್ತನು ಸತ್ತವರೊಳಗಿಂದ ಎದ್ದಿದ್ದಾನೆ. ಅದೇ ಪ್ರ
ಕಾರ ಆತನಲ್ಲಿ ವಿಶ್ವಾಸವಿಡುವವರೆಲ್ಲರು ಆತನಲ್ಲಿ ಬದುಕಿಸ
ಲ್ಪಡುವರು. (೧ ಕೊರಿಂಥ. ೧೫, ೨೨.)

ಮೃ. ಈ ಮಾತು ಸತ್ಯವೆಂದು ನಿನಗೆ ಹ್ಯಾಗೆ ತಿಳಿಯು
ತ್ತದೆ? ಅದಕ್ಕೆ ಸಾಕ್ಷಿ ಯಾರು?

ಆ. ನಾವು ಮನುಷ್ಯರ ಸಾಕ್ಷಿಯನ್ನು ಅಂಗೀಕರಿಸಿದರೆ,
ದೇವರ ಸಾಕ್ಷಿಯು ಅದಕ್ಕಿಂತ ದೊಡ್ಡದು. ದೇವರ ಸಾಕ್ಷಿ
ಯಾವದಂದರೆ — ತನ್ನ ಮಗನ ವಿಷಯ ಕೊಟ್ಟದ್ದೇ. ದೇವ
ರ ಮಗನಲ್ಲಿ ವಿಶ್ವಾಸವಿಡುವವನು ತನ್ನಲ್ಲಿ ಸಾಕ್ಷಿ ಉಂಟಾ
ದವನಾಗಿದ್ದಾನೆ. (೧ ಯೋಹಾ. ೫, ೯. ೧೦.)

ಮೃ. ನೀನು ಬಹಳ ದೊಡ್ಡ ಪಾಪಿಷ್ಟನಾಗಿದ್ಧೀ. ಹುಟ್ಟಿದಂದಿನಿಂದ ಇಂದಿನ ಪರಿಯಂತರ ಪಾಪ ಮಾಡುತ್ತಾ ಬಂದಿ. ಮತ್ತು ನಿನ್ನಂಥವರ ವಿಷಯ ಯೇಸು ಹೇಳಿದ್ದೇನಂದರೆ — ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕಿಂತ ಒಂಟೆಯು ಸೂಜಿಯ ಬೆಜ್ಜದಲ್ಲಿ ತೂರುವದು ಸುಲಭ. (ಮತ್ತಾ. ೧೯, ೨೪.)

ಆ. ಈ ಮಾತು ಖರೆ; ಪರಂತು ಯೇಸು ಕ್ರಿಸ್ತನು ಹೇಳಿದನಲ್ಲಾ — ಇದು ಮನುಷ್ಯರಿಗೆ ಅಸಾಧ್ಯವಾದದ್ದು; ಆದರೆ ದೇವರಿಗೆ ಎಲ್ಲಾ ಸಾಧ್ಯವಾಗಿದೆ. (ಮತ್ತಾ. ೧೯, ೨೬.)

ಮೃ. ನಿನ್ನ ವಿಷಯ ನನಗೆ ಬಹಳ ಭಯ ಬರುತ್ತದೆ. ಪರಿಶುದ್ಧ ವಾಕ್ಯ ಕೇಳಿಕೋ, ಅದೇನಂದರೆ — ಐಶ್ವರ್ಯವಂತರೇ! ನಿಮ್ಮ ಮೇಲೆ ಬರುವ ವ್ಯಥೆಗಳಿಗೋಸ್ಕರ ಅತ್ತು ಗೋಳಾಡಿರಿ. ನಿಮ್ಮ ಐಶ್ವರ್ಯವು ಕೆಟ್ಟು ಹೋಯಿತು; ನಿಮ್ಮ ವಸ್ತ್ರಗಳು ನುಸಿ ಹತ್ತಿ ಹೋದವು; ನಿಮ್ಮ ಚಿನ್ನವೂ ಬೆಳ್ಳಿಯೂ ತುಕ್ಕು ಹಿಡಿದು ಹೋದವು. ಅವುಗಳ ತುಕ್ಕು ನಿಮಗೆ ಸಾಕ್ಷಿಯಾಗಿದ್ದು, ನಿಮ್ಮ ಮಾಂಸವನ್ನು ಬೆಂಕಿಯ ಹಾಗೆ ತಿನ್ನುವದು. ಕಡೇ ದಿನಗಳಿಗೆ ದ್ರವ್ಯಗಳನ್ನು ಇಟ್ಟು ಕೊಂಡಿದ್ಧೀರಿ. ಇಗೋ, ನಿಮ್ಮ ಹೊಲಗಳ ಪೈರನ್ನು ಕೊಯಿದ ಕೆಲಸದವರಿಂದ ನೀವು ಮೋಸವಾಗಿ ಹಿಡಿದ ಕೂಲಿಯು ಕೂಗುತ್ತದೆ; ಮತ್ತು

ಪೈರನ್ನು ಕೊಯಿದವರ ಮೊರೆಗಳು ಸೈನ್ಯಗಳ ಕರ್ತನ ಕಿವಿಗಳಲ್ಲಿ ಪ್ರವೇಶಿಸಿದವು. ಭೂಮಿಯ ಮೇಲೆ ಸೌಖ್ಯವೂ ಭೋಗವೂ ಉಳ್ಳವರಾಗಿ, ಕೊಲೆಯ ದಿವಸವಾಯಿತೆಂದು ನಿಮ್ಮ ಹೃದಯಗಳನ್ನು ಪೋಷಿಸಿದ್ದೀರಿ. ನೀತಿವಂತನಿಗೆ ಆಜ್ಞೆ ನಿರ್ಣೈಸಿ, ಅವನನ್ನು ಕೊಂದು ಹಾಕಿದ್ದೀರಿ. (ಯಾಕೋಬ. ೫, ೧—೬.)

ಆ. ಎಲೋ ಮೃತ್ಯುವೇ, ದೇವರ ಕಡಿಗೆ ತಿರಿಗಿ ಕೊಳ್ಳದ ಮುಂಚೆ, ನಾನು ಮಾಡಿದ ನನ್ನ ಪಾಪಗಳನ್ನು ದೇವರ ವಾಕ್ಯದ ಆಧಾರದಿಂದ ನನ್ನ ಮುಂದೆ ಹಾಕಿ, ನನಗೆ ಯಾಕೆ ಭಯ ತೋರಿಸುತ್ತೀ? ಇದಕ್ಕೆ ನನ್ನ ಪ್ರತ್ಯುತ್ತರ ಏನಂದರೆ— ಒಬ್ಬನು ಕ್ರಿಸ್ತನಲ್ಲಿ ಇದ್ದರೆ, ಹೊಸ ಸೃಷ್ಟಿಯೇ; ಹಳೆಯವುಗಳು ಕಳದು ಹೋದವು; ಇಗೋ, ಎಲ್ಲಾ ಹೊಸದಾಯಿತು. (೨ ಕೊರಿಂಥ. ೫, ೧೭. ೧೮.) ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬಂದನು. ಅವರಲ್ಲಿ ಮೊದಲನೆಯವನು ನಾನೇ. (೧ ತಿಮೋಥಿ. ೧, ೧೫.) ಇದನ್ನು ನಾನು ತಿಳು ಕೊಂಡ ಕೂಡಲೇ, ಆತನ ಪುಣ್ಯದಲ್ಲಿ ನಂಬಿಕೆಯನ್ನಿಟ್ಟು, ತಂದೆಯಾದ ದೇವರ ಕಡಿಯಿಂದ ನನ್ನ ಸರ್ವ ಪಾಪಗಳ ಪರಿಹಾರವನ್ನು ಹೊಂದಿದ್ದೇನೆ. ಮತ್ತು ಕ್ರಿಸ್ತನಲ್ಲಿ ಇಡುವ ವಿಶ್ವಾಸದ ಮುಖದಿಂದ ದೇವರ ಕಡಿಯಿಂದ ಪ್ರಾಪ್ತಿಯಾಗು

ವ ನೀತಿಯನ್ನು ನಾನು ಸಂಪಾದಿಸಿ ಕೊಂಡು, ನನ್ನ ದೇಹದ ಅಂಗಗಳನ್ನು ಪರಿಶುದ್ಧತ್ವಕ್ಕಾಗಿ ನೀತಿಗೆ ದಾಸನಾಗಿ ಒಪ್ಪಿಸಿ ಕೊಟ್ಟೆನು. ಇದರಂತೆ ನನ್ನ ದ್ರವ್ಯವು ಇನ್ನು ನನ್ನದಲ್ಲಾ; ಅದನ್ನು ಆಗಲೇ ದೇವರಿಗೆ ಅರ್ಪಿಸಿ ಬಿಟ್ಟೆನು. ನೀನು ನನಗೆ ಗೋಳಾಡಿ ಅತ್ತುಕೋ ಎಂದು ಹೇಳುತ್ತೀ. ಆದರೆ ನಾನು ನಿನ್ನ ಹೇಳುವಿಕೆಯ ಪ್ರಕಾರ ಅಳುವದಿಲ್ಲಾ; ಯಾಕಂದರೆ— ಕರ್ತನು ಹೇಳಿದನಲ್ಲಾ — ದುಃಖ ಪಡುವವರು ಭಾಗ್ಯವಂತರು; ಯಾಕಂದರೆ ಅವರು ಆದರಣೆ ಹೊಂದುವರು. (ಮತ್ತಾ. ೫, ೪.) ಈ ಪ್ರಕಾರ ನಾನು ನನ್ನ ಪಾಪಗಳ ನಿಮಿತ್ತ ದುಃಖ ಪಶ್ಚಾತ್ತಾಪ ಪಟ್ಟಿದ್ದೇನೆ. ಆದಕಾರಣ ನೀನು ಹೇಳುವದು ನನಗೆ ಈಗ ಬೇಡ. ಇದಲ್ಲದೆ ನೀನು ನನಗೆ ಭಯ ಹುಟ್ಟಿಸುವದಕ್ಕೆ — ನಿನ್ನ ದ್ರವ್ಯ ನಾಶವಾಗಿದೆ, ನಿನ್ನ ಬಂಗಾರ ಬೆಳ್ಳಿ ತುಕ್ಕು ಹಿಡಿದವೆ ಎಂದು ಹೇಳಿದಿಯಲ್ಲಾ. ಚಿಂತೆ ಇಲ್ಲಾ; ಯಾಕಂದರೆ ಪರಲೋಕದಲ್ಲಿ, ಹುಳ ಕಿಲುಬು ಕೆಡಿಸದಲ್ಲಿಯೇ ನಾನು ನನಗೋಸ್ಕರ ದ್ರವ್ಯವನ್ನು ಇಟ್ಟು ಕೊಂಡಿದ್ದೇನೆ. (ಮತ್ತಾ. ೬, ೧೯. ೨೦.) ಇದು ನಿನಗೆ ಯಾಕೆ ತಾವಿಕೆ ಇಲ್ಲಾ? ನಿನ್ನ ವಸ್ತ್ರಗಳು ನುಸಿ ಹತ್ತಿ ಹೋದವೆಂದು ನನಗೆ ಹೇಳಿದಿ. ಇದು ಸತ್ಯವೇ ಸರಿ. ನನ್ನ ಸ್ವಂತ ನೀತಿ ನೋಡಿದರೆ, ಅದು ಮೈಲಿಗೆಯ ವಸ್ತ್ರದ ಹಾಗಿದೆ. (ಯೆಶಾ. ೬೪,

೬.) ಆದರೆ ಮರಣ ಹೊಂದಿದ ಬಳಿಕ ನನಗೆ ಶುಭ್ರವಾದ ನಿಲುವಂಗಿ ಶಿಕ್ಕುವದು. (ಪ್ರಕಟಣೆ. ೬, ೧೧.)

ಮೃ. ಈ ಎಲ್ಲಾ ಮಾತುಗಳನ್ನು ದೇವರು ಮಾಡೇ ಮಾಡ್ಯಾನು ಎಂಬುವದಕ್ಕೆ ನಿನಗೆ ಭರವಸವೇನು?

ಆ. ದೇವರು, ಸುಳ್ಳು ಹೇಳುವ ಹಾಗೆ, ಮನುಷ್ಯನಲ್ಲಾ; ತಾನು ಹೇಳಿದ್ದಕ್ಕೆ ಪಶ್ಚಾತ್ತಾಪ ಪಡುವ ಹಾಗೆ, ನರಪುತ್ರನಲ್ಲಾ; ಆತನು ನುಡಿದು, ಮಾಡನೇ? ಮಾತಾಡಿ, ಅದನ್ನು ಸ್ಥಾಪಿಸನೇ? (ಅಂಕೆ. ೨೩, ೧೯.) ದೇವರ ವರಗಳೂ ಕರೆಯುವಿಕೆಯೂ ಪಶ್ಚಾತ್ತಾಪಕ್ಕೆ ಗುರಿಯಾದಂಥವುಗಳಲ್ಲ. (ರೋಮ. ೧೧, ೨೯.) ಆತನು ನಮಗೆ ಆತ್ಮದ ಮುಂಗಡವನ್ನು ಕೊಟ್ಟಿದ್ದಾನೆ. (೨ ಕೊರಿಂಥ. ೫, ೫.) ಮತ್ತು ದೇವರ ಆತ್ಮದಿಂದ ನಡಿಸಲ್ಪಟ್ಟವರಷ್ಟು ದೇವರ ಮಕ್ಕಳಾಗಿದ್ದಾರೆ. (ರೋಮ. ೮, ೧೪.) ನನಗೆ ಇಷ್ಟು ಭರವಸ ಇರಲಿಕ್ಕಾಗಿ, ನೀನು ಹತ್ತರ ಬಂದಾಗ್ಯೂ, ನನ್ನ ಭರವಸವು ಕದಲುವದಿಲ್ಲಾ. (ಇಬ್ರಿ. ೬, ೧೯.)

ಮೃ. ನನ್ನ ಕೊಂಡಿಯ ನೆನಪು ನಿನಗೆ ಉಂಟೋ ಏನು? ಅದರ ಮುಂದೆ ನೀನು ಅಗದಿ ನಿಂದಿರ ಕೂಡದು. ಅದನ್ನು ನಾ ಬಲ್ಲೆ. ಅದು ಮುಟ್ಟಿದರೆ ಸಾಕು, ನಿನ್ನ ಪ್ರಾಣವನ್ನು ಘಾಸಿ ಮಾಡಿ ಬಿಡುವದು.

ಆ. ಎಲೇ ಮರಣವೇ, ನಿನ್ನ ಕೊಂಡಿ ಎಲ್ಲಿ? (೧ ಕೊರಿಂಥ. ೧೫, ೫೬.)

ಮ್ರು. ಮರಣದ ಕೊಂಡಿ ಪಾಪವೇ. (೧ ಕೊರಿಂಥ. ೧೫, ೫೬.)

ಆ. ಮತ್ತು ಪಾಪದ ಬಲವೇನು?

ಮ್ರು. ಪಾಪದ ಬಲವು ನ್ಯಾಯಪ್ರಮಾಣವೇ. (೧ ಕೊರಿಂಥ. ೧೫, ೫೬.)

ಆ. ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಿವಾಗಿ ನಮಗೆ ಜಯವನ್ನು ಕೊಡುವ ದೇವರಿಗೆ ಸ್ತೋತ್ರವು! (೧ ಕೊರಿಂಥ. ೧೫, ೫೭.) ಕ್ರಿಸ್ತನು ನಮ್ಮ ಸ್ಥಳದಲ್ಲಿ ಶಾಪಗ್ರಸ್ತನಾಗಿ, ನ್ಯಾಯಪ್ರಮಾಣದ ಶಾಪದೊಳಗಿಂದ ನಮ್ಮನ್ನು ಕೊಂಡು ಕೊಂಡನು. (ಗಲಾತ್ಯ. ೩, ೧೩.) ನಾವು ಈಗ ನ್ಯಾಯಪ್ರಮಾಣಕ್ಕಲ್ಲ, ಕೃಪೆಗೆ ಒಳಗಾಗಿದ್ಧೇವೆ. (ರೋಮ. ೬, ೧೪.) ಆದದರಿಂದ ಪಾಪದ ಬಲವು ನಮ್ಮ ಮೇಲೆ ನಡಿಯಕೂಡದು. ಎಲೋ ಮರಣವೇ! ನಿನ್ನ ಬಲವು ಹೋಯಿತು, ನಿನ್ನ ಕೊಂಡಿ ಮುರಿಯಿತು. ನಾನು ನಿನ್ನ ಹೆಗಲಿನ ಮೇಲೆ ಕೂತು, ನಿನ್ನನ್ನು ನನ್ನ ವಾಹನ ಮಾಡಿ, ನೀನು ನನ್ನನ್ನು ನನ್ನ ತಂದೆಯ ಮನೆಗೆ ವೈಯುವದಕ್ಕೆ ನಿನ್ನನ್ನು ಹಚ್ಚೇನು. ಇಷ್ಟು ಜಯವನ್ನು ನಿನ್ನ ಮೇಲೆ ನಾನು ಹೊಂದಿದ್ಧೇನೆ.

ಮೃ. ಎಲೋ, ನನ್ನ ಹೊರ್ತು ಇನ್ನೊಂದು ಭಯಂಕರವಾದ ಮರಣ ಉಂಟು. ಅದರ ವಿಚಾರ ನೀನು ಮಾಡಿದ್ಧೀಯಾ? ಅದರ ಕೈಯೊಳಗಿಂದ ಹ್ಯಾಗೆ ತಪ್ಪಿಸಿ ಕೊಳ್ಳುವಿ?

ಆ. ಮೊದಲನೇ ಪುನರುತ್ಥಾನದಲ್ಲಿ ಯಾರಿಗೆ ಪಾಲು ಉಂಟೋ, ಅವರ ಹೆಸರು ಜೀವದ ಪುಸ್ತಕದಲ್ಲಿ ಬರೆಯಲ್ಪಟ್ಟದೆ. ಅವರು ಭಾಗ್ಯವಂತರೂ ಪರಿಶುದ್ಧರೂ ಆಗಿದ್ದಾರೆ. ಅಂಥವರ ಮೇಲೆ ಎರಡನೇ ಮರಣದ ಅಧಿಕಾರ ಇಲ್ಲ. (ಪ್ರಕಟಣೆ. ೨೦, ೨೬.)

ಈ ಪ್ರಕಾರ ಮೃತ್ಯುವು ಆತ್ಮರಾಮನಾಯಕನನ್ನು ಮೊದಲು ಪರೆ ಹಚ್ಚಿ ನೋಡಿದನು. ಮತ್ತು ಆತನಿಗೆ ಭರವಸ ಕಂಡ ಬಳಿಕ, ಅವನಿಗೆ ಅಂದದ್ದೇನಂದರೆ —

ಮೃ. ಎಲೇ ಪರಾತ್ಪರನಾದ ದೇವರ ಸೇವಕನೇ! ನೀನು ಭಾಗ್ಯವಂತನು; ನೀನು ಒಳ್ಳೇ ಯುದ್ಧ ಮಾಡಿದಿ; ಓಟವನ್ನು ಮುಗಿಸಿದಿ; ಈಗ ನಿನಗೆ ಅರಸತನದ ಕಿರೀಟ ಇಟ್ಟದೆ. ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾದ ದೇವರು ನಿನಗೆ ಕೊಟ್ಟಾನು. ನಿತ್ಯ ಜೀವದ ಪಾಲನ್ನು ನೀನು ದೊರಕಿಸಿ ಕೊಂಡಿದ್ಧೀ. ಜಗತ್ತಿನಲ್ಲಿರುವ ವಿಷಯಸುಖಗಳನ್ನು ನೀನು ರುಚಿ ನೋಡಿದಿ; ಪರಂತು ಅವುಗಳಲ್ಲಿ ನಿಜಸುಖ ನಿನಗೆ ಶಿಕ್ಕಲಿಲ್ಲಾ. ಮೂರ್ತಿಪೂಜಕರಾದ ಅಜ್ಞಾನಿಗಳ ಮಾರ್ಗಗಳನ್ನು ನೀನು

ಆಚರಿಸಿ ನೋಡಿದಿ; ಆದರೆ ಅವುಗಳಿಂದ ನಿನಗೆ ಶಾಂತಿಯೂ ಜೀವದ ರಕ್ಷಣೆಯೂ ಪ್ರಾಪ್ತಿಯಾಗಲಿಲ್ಲಾ. ಪರಂತು ದೇವರು ನಿನ್ನ ಕಣ್ಣು ತೆರದು, ನಿನಗೆ ಸದ್ಗುರುವಿನ ಉಪದೇಶ ದೊರಕ ಕೊಟ್ಟನು. ಈಗ ನೀನು ಭಯವಿಲ್ಲದೆ, ಆನಂದಭರಿತನಾಗಿದ್ಧೀ. ಆದರೆ ಈ ನಿನ್ನ ಆನಂದ ಬೇಗನೇ ಸಂಪೂರ್ಣವಾಗುವದು, ಹ್ಯಾಗಂದರೆ — ಪರಾತ್ಪರನ ರಾಜ್ಯದಲ್ಲಿ ನೀನು ಆತನ ಸೇವೆ ಸ್ತುತಿ ಮಾಡುತ್ತಾ ಸದಾಕಾಲ ಇರುವಿ.

ಮರಣದ ಕಾಲದಲ್ಲಿ ಧೈರ್ಯವು, ನಿರ್ಭಯವು, ದೇವರ ಮೇಲಿನ ವಿಶ್ವಾಸವು, ನಿತ್ಯಜೀವದ ಆಶೆಯು, ಭೂಲೋಕದ ಪದಾರ್ಥಗಳ ಮೇಗಣ ನಿರಾಶೆಯು, ಇವು ಮೊದಲಾದ ಸದ್ಗುಣಗಳು ಕ್ರಿಸ್ತನ ಸದ್ಭಕ್ತರ ಹೃದಯಗಳಲ್ಲಿ ನೋಡ ಬೇಕು. ಅನ್ಯ ಮಾರ್ಗದ ಜನರೂ ಅವಿಶ್ವಾಸಿಗಳೂ, ತಾವು ಈ ಲೋಕದ ಸುಖದ ಆನಂದದಲ್ಲಿ ಇರುವ ಪರಿಯಂತರ, ತಮ್ಮ ದ್ರವ್ಯ, ಕೀರ್ತಿ, ಜಾಣತನ ಮುಂತಾದವುಗಳನ್ನು ನೋಡಿ, ಸಂತೋಷಪಡುತ್ತಾರೆ. ಪರಂತು ಮರಣದ ಕಾಲ ಬಂತಂದರೆ, ಅವರು ಎಷ್ಟೋ ಭಯಸ್ಥರಾಗುವರು, ಪ್ರಪಂಚದ ವಿಷಯಗಳಲ್ಲಿ ಎಷ್ಟೋ ಆಶೆಯುಳ್ಳವರಾಗಿ, ತಾವು ಯಾರು? ಎಲ್ಲಿಂದ ಬಂದೆವು? ಎಲ್ಲಿಗೆ ಹೋಗುತ್ತೇವೆ? ತಮ್ಮ ಗತಿ ಏನಾದೀತು? ಎಂಬುವದರ ವಿಷಯ ಅವರು ಕುರುಡತನದಲ್ಲಿ ಇರುತ್ತಾರೆ.

ಅವರಲ್ಲಿ ಎಷ್ಟೋ ಜನರು ಕಲ್ಪಿತ ಮಾತುಗಳ ಮೇಲೆ ವ್ಯರ್ಥ ಭರವಸವಿಡುತ್ತಾರೆ. ಎಷ್ಟೋ ಮಂದಿ ತಮ್ಮ ಸಂಸಾರದ ಆಟ ಮುಗಿಯಿತೆಂದು ನೆನಸುತ್ತಾರೆ. ಅನೇಕರು ಬಹಳ ದುಃಖ ಪಡುತ್ತಾ ತಮ್ಮ ಪ್ರಾಣ ಬಿಡುತ್ತಾರೆ. ಬೇರೆ ಅನೇಕರು ಎತ್ತು ಎಮ್ಮೆಗಳು ಸಾಯುವ ಪ್ರಕಾರ ತಮ್ಮ ಜೀವ ಬಿಡುತ್ತಾರೆ. ಆದರೆ ಆತ್ಮರಾಮನಾಯಕನ ಹಾಗೆ ಯೇಸು ಕ್ರಿಸ್ತನಲ್ಲಿ ನಿದ್ರೆ ಹೋಗುವವರೇ ಭಾಗ್ಯವಂತರು; ಯಾಕಂದರೆ ಅವರು ಪುನರುತ್ಥಾನದ ಅರುಣೋದಯದಲ್ಲಿ ನಗೆಮೋರೆಯುಳ್ಳವರಾಗಿ ತಮ್ಮ ರಕ್ಷಕನಿಗೆ ಎದುರು ಹೋಗಿ, ಆತನ ಸಂಗಡ ಸರ್ವಕಾಲ ಬಾಳುವರು.

ಆತ್ಮರಾಮನಾಯಕನಿಗೆ ಮುಂದೆ ಏನಾಯಿತೆಂಬುವದನ್ನು ಹೇಳಲಿಕ್ಕೆ ನಮಗೆ ಬಹಳ ಸಂತೋಷ. ಅವನು ತನ್ನ ಸ್ವಪ್ನದಿಂದ ಎಚ್ಚರಿಕೆಯಾಗಿ ನೋಡುತ್ತಿರುವಾಗ, ನಿಜವಾಗಿಯೇ ತನ್ನ ಅಂತ್ಯದಿನ ಸಮೀಪ ಬಂತೆಂದು ತಿಳು ಕೊಂಡು, ತನ್ನ ಮಕ್ಕಳನ್ನೂ ಹೆಂಡತಿಯನ್ನೂ ಹತ್ತರ ಕರೆದು, ಪರಲೋಕವನ್ನು ದೃಷ್ಟಿಸಿ, ಅವರಿಗೆ ಹೇಳಿದ್ದೇನಂದರೆ — ನಾನು ಕರ್ತನ ಬಳಿಗೆ ಶೇರುತ್ತೇನೆ; ನೀವು ದಿಕ್ಕಿಲ್ಲದವರೆಂದು ಚಿಂತೆ ಪಡಬೇಡಿರಿ; ಯಾಕಂದರೆ ಆತನು ದಿಕ್ಕಿಲ್ಲದವರಿಗೆ ಆಶ್ರಯವಾಗಿದ್ದಾನೆ; ಮತ್ತು ನೀವು ಸಹ ಸ್ವಲ್ಪ ದಿವಸದಲ್ಲಿ ನನ್ನ ಹಿಂದೆ

ಬರುವಿರಿ; ಆದರ ನಿಮಿತ್ತ ನೀವು ಅಳ ಬೇಡಿರಿ; ದೇವರ ಮೇ
ಲೆ ನಿಮ್ಮ ಭರವಸವಿಡಿರಿ; ನಾವೆಲ್ಲರು ಬೇಗನೇ ಒಂದೇ ಸ್ಥಳ
ದಲ್ಲಿ ಕೂಡಿರುವೆವು; ಅಲ್ಲಿಂದ ತಾವು ಎಂದಿಗೂ ಅಗಲುವ
ದಿಲ್ಲ ಎಂತ ಹೇಳುವಷ್ಟರೊಳಗೆ, ಅವನ ಜೀವ ಸಮೀಪಕ್ಕೆ
ಬಂದ ಕಾರಣ, ಅವನು ಇನ್ನು ಬಹಳ ಮಾತಾಡ ಶಕ್ತಿ ಇಲ್ಲದ
ವನಾಗಿ, ಮೊಣಕಾಲೂರಿರಿ ಎಂದು ಹೇಳಿ, ತೊದಲು ಮಾ
ತಿನಿಂದ ಅವರ ಸಂಗಡ ಪ್ರಾರ್ಥನೆ ಮಾಡಿದನು, ಏನಂದ
ರೆ —ಪ್ರಭುವೇ! ಈಗ ನಿನ್ನ ವಾಕ್ಯದ ಪ್ರಕಾರ ನಿನ್ನ ದಾಸನ
ನ್ನು ಸಮಾಧಾನವಾಗಿ ಕಳುಹಿಸಿ ಬಿಡುತ್ತೀ; ಯಾಕಂದರೆ ನೀ
ನು ಎಲ್ಲಾ ಜನಗಳ ಸಮ್ಮುಖದಲ್ಲಿ ಸಿದ್ಧ ಮಾಡಿದಂಥ, ಜ
ನಾಂಗಗಳಿಗೆ ಪ್ರಕಟಣೆಯಾದ ಬೆಳಕೂ ನಿನ್ನ ಜನರಾದ ಇಸ್ರ
ಯೇಲಿನ ಮಹಿಮೆಯೂ ಆದಂಥ ನಿನ್ನ ರಕ್ಷಣೆಯನ್ನು ನನ್ನ
(ವಿಶ್ವಾಸದ) ಕಣ್ಣುಗಳು ಕಂಡವೆ. (ಲೂಕ. ೨, ೨೯ — ೩೨.)
ಕರ್ತನಾದ ಯೇಸುವೇ! ನನ್ನ ಆತ್ಮವನ್ನು ಅಂಗೀಕರಿಸು (ಅ
ಪೊ. ಕ್ರಿ. ೭, ೫೯) ಎಂದು ಕೂಗಿ, ನಿದ್ರೆಗೈದನು. ಬಳಿಕ ಅವ
ನ ಮಕ್ಕಳು ಹೆಂಡತಿ ಎದ್ದು, ಅವನನ್ನು ದೃಷ್ಟಿಸುವಾಗ, ಅ
ವನ ಮುಖ ದೂತನ ಮುಖದ ಹಾಗೆ ಕಂಡಿತು. (ಅಪೊ. ಕ್ರಿ.
೬, ೧೫.) ಪರಂತು ಅವನ ಆತ್ಮವು ಅದನ್ನು ಕೊಟ್ಟ ದೇವರ
ಬಳಿಗೆ ಹೊರಟು ಹೋಯಿತು. (ಪ್ರಸಂಗಿ. ೧೨, ೭.)

ಆದರೆ ಈಗ ಈ ಪುಸ್ತಕವನ್ನು ಓದುವ ಬುದ್ಧಿವಂತರಿಗೆ ನಾನು ಅಗತ್ಯವಾದ ಒಂದು ದೊಡ್ಡ ಪ್ರಶ್ನೆ ಮಾಡುತ್ತೇನೆ. ಅದೇನಂದರೆ — ನಿಮ್ಮಲ್ಲಿ ಒಬ್ಬೊಬ್ಬನಿಗೆ ಆತ್ಮವು ಇರುವದರಿಂದ, ನಿಮ್ಮ ಹೆಸರು ಆತ್ಮರಾಮನಾಯಕನೆಂಬದು. ಆದರೆ ನಿಮ್ಮ ಮನಸ್ಸಿನ ಸಂಚಾರವು ಈಗ ಸಂಸಾರದ ಉದ್ಯೋಗಗಳಲ್ಲಿ ಉಂಟೆಂದು ನೆನಸುತ್ತೇನೆ. ಹೀಗೆ ಅನ್ನುವದರಿಂದ ನೀವು ಕೋಪ ಮಾಡ ಬಾರದು. ಆದರೆ ಮೇಲೆ ಬರದಂಥಾ ಆತ್ಮರಾಮನಾಯಕನಿಗೆ ಆದ ಪ್ರಕಾರ, ನಿಮ್ಮ ಮರಣದ ವೇಳೆಯಲ್ಲಿ ನಿಮಗೂ ಆಗುವದೆಂದು ಭರವಸ ನಿಮಗೆ ಉಂಟೇನೋ? ಇದ್ದದ್ದಾದರೆ, ನೀವು ಭಾಗ್ಯವಂತರು; ಇಲ್ಲದಿದ್ದರೆ, ಈಗಲೇ ನಿಮ್ಮ ಅಂತ್ಯದ ಪರಿಣಾಮದ ವಿಚಾರಣೆ ಮಾಡ ತಕ್ಕದ್ದು; ಯಾಕಂದರೆ ನೀವು ಹೋಗಲಿಕ್ಕಿರುವ ಪಾತಾಳದಲ್ಲಿ ಕೆಲಸವೂ ಮತಿಯೂ ತಿಳುವಿಕೆಯೂ ಜ್ಞಾನವೂ ಇಲ್ಲಾ. (ಪ್ರಸಂಗಿ. ೯, ೧೦) ಆದದರಿಂದ —

ಯಾವತ್ ಸ್ವಸ್ಥಮಿದಂ ದೇಹಂ
ಯಾವನ್ ಮೃತ್ಯುಶ್ಚ ದೂರತಃ ।
ತಾವದಾತ್ಮಹಿತಂ ಕುರ್ಯ್ಯಾತ್
ಪ್ರಾಣಾನ್ತೆ ಕಿಂಕರಿಷ್ಯತಿ ॥

೧. ಮೃತ್ಯುವಿಟ್ಟ ಬಂಧವನ್ನು
ಬಿಡಿಸಿದ ಮನುಜ!
ಶತ್ರು ತಂದ ಸೇನೆಯನ್ನು
ಓಡಿಸಿದ ನಾಯಕ!
ತ್ರಾಣದಿಂದ ಲೋಕವಾಳು,
ಕ್ರೂಜೆ ತಾಳಿದವನೇ!
ಜಯಪ್ರದನಾಗಿ ಬಾಳು,
ಓ ಮಹತ್ವದರಸೇ!

೨. ಜಯಶಾಲಿಕ್ರಿಸ್ತ, ನನ್ನ
ಶೇರಿಸಿಕ್ಕು ದಂಡಿಗೆ!
ಡಾಲು ಖಡುಗಂಗಳನ್ನು
ಇಡು ನನ್ನ ಹಸ್ತಕೆ!
ಧೀರ ಯುದ್ಧಧ್ವನಿ ಎತ್ತಿ,
ಹತ್ತಿ ನಿನ್ನ ಹೆಜ್ಜೆಗೆ,
ಶತ್ರುಜನನಡುನೆತ್ತಿ
ಭಂಗ ಮಾಡಿ, ಜೈಸುವೆ.

೩. ಸುಖಕ್ಷೇಮವಾಗಿ ಸಾಯ್ವೆ,
ತಂದೆಗಾತ್ಮವೊಪ್ಪಿಸಿ;
ಮೃತ್ಯುದ್ವಾರವನ್ನು ಹಾಯ್ವೆ
ಕ್ರಿಸ್ತನಾಮಜಯದಿ.
ಈ ಶರೀರವನ್ನು ಕೀಟ
ತಿಂದರೇನು ಚಿಂತೆಯು?
ನಿತ್ಯ ಮಹಿಮೇ ಕಿರೀಟ
ಹೊಂದಿ, ಹರ್ಷಗೊಂಬೆನು.

ಜೀವಾಂತ್ಯಸ್ಮರಣ್

ಅಥವಾ

ಆತ್ಮರಾಮನಾಯಕನು, ಮೃತ್ಯು ಶಿಪಾಯಿ
ಇವರಿಬ್ಬರು ಜೀವಾಂತ್ಯದ ವಿಷಯಕ್ಕೆ ಮಾಡಿದ

ಸಂವಾದ

ಮೂರನೇ ಛಾಪೆ

MANGALORE
PRINTED BY STOLZ & REUTHER, BASEL MISSION PRESS
1869